## ಸಾವಯವ ಪ್ಯಾಕೇಜ್

| ಪರಿಕರಗಳು | ಪ್ರಮಾಣ/ ಹೆಕ್ಟೇರ್‌ಗೆ/ ವರ್ಷಕ್ಕೆ |
|---|---|
| ಕೊಟ್ಟಿಗೆ ಗೊಬ್ಬರ (2 ಸಮ ಕಂತುಗಳಲ್ಲಿ) | 25 ಮೆ. ಟನ್ |
| ಸೆರಿ ಕಾಂಪೋಸ್ಟ್ ಅಥವಾ ಎರೆಗೊಬ್ಬರ (2 ಸಮ ಕಂತುಗಳಲ್ಲಿ ) | 20 ಮೆ. ಟನ್ |
| ಹಸಿರೆಲೆ ಗೊಬ್ಬರದ ಬೀಜ (ಮುಂಗಾರಿನಲ್ಲಿ 2 ಸಮ ಕಂತುಗಳಲ್ಲಿ ) | 50 ಕೆ.ಜಿ. |
| ಜೈವಿಕ ಗೊಬ್ಬರ (ಅಜಟೋಬ್ಯಾಕ್ಟರ್) (2 ಸಮ ಕಂತುಗಳಲ್ಲಿ) | 25 ಕೆ.ಜಿ. |
| ಜೈವಿಕ ಗೊಬ್ಬರ (ಪಿ.ಎಸ್.ಬಿ) (2 ಸಮ ಕಂತುಗಳಲ್ಲಿ) | 5 ಕೆ.ಜಿ. |
| ಬೇವಿನ ಹಿಂಡಿ (ಒಂದು ಬಾರಿ) | 1,000 ಕೆ.ಜಿ. |

## ಸಾಂಪ್ರದಾಯಿಕ ಪ್ಯಾಕೇಜ್

| ಪರಿಕರಗಳು | ಪ್ರಮಾಣ/ ಹೆಕ್ಟೇರ್‌ಗೆ/ ವರ್ಷಕ್ಕೆ |
|---|---|
| ಕೊಟ್ಟಿಗೆ ಗೊಬ್ಬರ (2 ಸಮ ಕಂತುಗಳು) | 25 ಮೆ.ಟನ್ |
| ಅಮೋನಿಯಂ ಸಲ್ಫೇಟ್ (ಎನ್) (5 ಸಮ ಕಂತುಗಳು) | 1750 ಕೆ.ಜಿ |
| ಸಿ೦ಗಲ್ ಸೂಪರ್ ಫಾಸ್ಫೇಟ್ (ಪಿ) (5 ಸಮ ಕಂತುಗಳು) | 875 ಕೆ.ಜಿ |
| ಮ್ಯೂರಿಯೇಟ್ ಆಫ್ ಪೊಟ್ಯಾಷ್ (ಕೆ) (5 ಸಮ ಕಂತುಗಳು) | 233 ಕೆ.ಜಿ. |



## ಸಾಂಪ್ರದಾಯಿಕ ಪ್ಯಾಕೇಜ್ ಗೆ ಹೋಲಿಸಿದಾಗ ಸಾವಯವ ಪ್ಯಾಕೇಜ್ ನಿಂದಾಗುವ ಪ್ರಯೋಜನಗಳು

- ಹೆಚ್ಚಿನ ಹಿಪ್ಪುನೇರಳೆ ಬೆಳವಣಿಗೆ
- ಹೆಚ್ಚಿನ ಹಿಪ್ಪುನೇರಳೆ ಇಳುವರಿ
- ಸುಸ್ಥಿರ ಸೊಪ್ಪಿನ ಉತ್ಪಾದನೆ
- ಮಣ್ಣಿನ ಫಲವತ್ತತೆಯಲ್ಲಿ ಸುಧಾರಣೆ
- ಮಣ್ಣಿನ ಆರೋಗ್ಯದ ನಿರ್ವಹಣೆ
- ಬೇಸಾಯದ ವೆಚ್ಚದಲ್ಲಿ ಇಳಿತ



ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

ನಿರ್ದೇಶಕರು
**ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ**
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ
ಭಾರತ ಸರ್ಕಾರ, ಮಾನಂದವಾಡಿ ರಸ್ತೆ
ಶ್ರೀರಾಂಪುರ, ಮೈಸೂರು–570 008
ಫೋನ್: 0821–2903285; ಫ್ಯಾಕ್ಸ್: 0821–2362845
email: cstrimys.csb@nic.in www.csrtimys.res.in
facebook: silk at csrti mysuru

Copies: 1000 March 2020

Technical Bulletin No.50 [Kan]

# ಹಿಪ್ಪುನೇರಳೆಯಲ್ಲಿ ಹೆಚ್ಚಿನ ಬೆಳವಣಿಗೆ ಹಾಗೂ ಇಳುವರಿಗಾಗಿ ಸಾವಯವ ಬೇಸಾಯ ಪದ್ಧತಿ







**ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ**
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ
ಭಾರತ ಸರ್ಕಾರ, ಶ್ರೀರಾಂಪುರ, ಮೈಸೂರು – 570008

## ಸಾವಯವ ಕೃಷಿ

ಸಾವಯವ ಕೃಷಿ ಎನ್ನುವುದು ಸಂಶ್ಲೇಷಿತ ಪರಿಕರಗಳಾದ ರಸಗೊಬ್ಬರಗಳು, ಕೀಟನಾಶಕಗಳು, ಕೃತಕ ಆಹಾರದ ಅಂಶಗಳು, ಪ್ರಚೋದಕಗಳು ಇತ್ಯಾದಿಗಳ ಬಳಕೆಯನ್ನು ತಪ್ಪಿಸಿ ಮಾಡುವ ಒಂದು ಕೃಷಿ ವ್ಯವಸ್ಥೆಯಾಗಿದೆ. ಹಾಗೂ ಈ ಕೃಷಿ ಪದ್ಧತಿಯು ಹೆಚ್ಚಾಗಿ ಬೆಳೆ ಪರಿವರ್ತನೆ, ಬೆಳೆಯ ಸಾವಯವ ತ್ಯಾಜ್ಯ, ಬೆಳೆಯ ಉಳಿಕೆಗಳು, ಪ್ರಾಣಿಜನ್ಯ ಗೊಬ್ಬರಗಳು, ಕೃಷಿ-ರಹಿತ ಸಾವಯವ ತ್ಯಾಜ್ಯಗಳು, ಖನಿಜದ ಅಂಶಗಳು, ಪೋಷಕಾಂಶ ಸಾಗಾಣಿಕೆಯ ಜೈವಿಕ ವ್ಯವಸ್ಥೆ, ಮತ್ತು ಜೈವಿಕ ರೀತಿಯ ಸಸ್ಯ ಸಂರಕ್ಷಣೆ ಇತ್ಯಾದಿಗಳ ಮೇಲೆ ಅವಲಂಬಿತವಾಗಿರುತ್ತದೆ.

ರೇಷ್ಮೆ ಕೃಷಿಯು ಭಾರತದ ದಕ್ಷಿಣ ಭಾಗದಲ್ಲಿ ಸಾಮಾನ್ಯವಾಗಿ ಅಭ್ಯಾಸ ಮಾಡುವ ಹೆಚ್ಚು ಆದಾಯ ಪಡೆಯುವ ಒಂದು ಉದ್ಯಮವಾಗಿದೆ, ಇದರಲ್ಲಿ ಹಿಪ್ಪುನೇರಳೆಯನ್ನು ರೇಷ್ಮೆ ಹುಳುಗಳಿಗೆ ಆಹಾರ ಸಸ್ಯವನ್ನಾಗಿ ಬೆಳೆಯಲಾಗುತ್ತಿದೆ. ಇತರೆ ಬೆಳೆಗಳಂತೆ ಹಿಪ್ಪುನೇರಳೆಗೂ ಸಹ ಸರಿಯಾದ ಬೇಸಾಯ ಪದ್ಧತಿಯ ಅವಶ್ಯಕತೆ ಇದೆ. ಏಕೆಂದರೆ ಹಿಪ್ಪುನೇರಳೆ ಸೊಪ್ಪು ರೇಷ್ಮೆ ಹುಳುವಿನ ಏಕೈಕ ಆಹಾರ ಸಸ್ಯವಾಗಿದೆ. ಅಲ್ಲದೆ ಹಿಪ್ಪುನೇರಳೆ ಸೊಪ್ಪಿನ ಗುಣಮಟ್ಟವು ರೇಷ್ಮೆ ಗೂಡಿನ ಗುಣಮಟ್ಟವನ್ನು ನೇರವಾಗಿ ನಿರ್ಧರಿಸುತ್ತದೆ. ಈಗ ಪ್ರಚಲಿತದಲ್ಲಿರುವ ವಿ-1 ಹಿಪ್ಪುನೇರಳೆ ತಳಿಯು ವರ್ಷಕ್ಕೆ ಒಂದು ಹೆಕ್ಟೇರ್ ಗೆ ಅತೀ ಹೆಚ್ಚಿನ ಅಂದರೆ ಸುಮಾರು 55-60 ಮೆ.ಟನ್ ನಷ್ಟು ಸೊಪ್ಪನ್ನು ಉತ್ಪಾದಿಸುತ್ತಿದೆ. ಈ ಹೆಚ್ಚಿನ ಇಳುವರಿ ಸಾಮರ್ಥ್ಯವನ್ನು ಗಳಿಸಲು ವರ್ಷಕ್ಕೆ ಒಂದು ಹೆಕ್ಟೇರ್ ಗೆ ಎನ್ ಪಿ ಕೆ ಪೋಷಕಾಂಶಗಳನ್ನು 350: 140: 140 ಪ್ರಮಾಣದಲ್ಲಿ ನೀಡಲಾಗುತ್ತಿದೆ. ಈ ರೀತಿಯಾಗಿ ಹೆಚ್ಚಿನ ಪ್ರಮಾಣದ ರಾಸಾಯನಿಕ ಗೊಬ್ಬರದ ಬಳಕೆಯು ಮಣ್ಣಿನ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದಷ್ಟೇ ಅಲ್ಲದೆ ರೈತರ ಮೇಲೂ ಅಧಿಕ ಕೃಷಿ ವೆಚ್ಚದ ಮೂಲಕ ಆರ್ಥಿಕ ಒತ್ತಡವನ್ನೂ ಹೇರಿದೆ.



## ಸಾವಯವ ಕೃಷಿಯ ಅವಶ್ಯಕತೆ

ರಾಸಾಯನಿಕ ಗೊಬ್ಬರಗಳ ಬೆಲೆ ಏರಿಕೆ ಹಾಗೂ ಅವುಗಳ ಹೆಚ್ಚಿನ ಅಗತ್ಯತೆಯಿಂದಾಗಿ ರೈತರು ಗುಣಮಟ್ಟದ ಸೊಪ್ಪಿನ ಸುಸ್ಥಿರ ಉತ್ಪಾದನೆಯನ್ನು ನಿರ್ವಹಿಸಲು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಜೊತೆಗೆ, ಹಿಪ್ಪುನೇರಳೆಯಲ್ಲಿ ಹೆಚ್ಚಿನ ರಾಸಾಯನಿಕಗಳು ಮತ್ತು ರಸಗೊಬ್ಬರಗಳನ್ನು ಬಳಸುತ್ತಿರುವುದರಿಂದ ಮಣ್ಣಿನ ಆರೋಗ್ಯವೂ ಕ್ರಮೇಣ ಹದಗೆಡುತ್ತಿದೆ. ಸಾವಯವ ಕೃಷಿ ಎನ್ನುವುದು ಸ್ವಾಭಾವಿಕವಾಗಿ ಲಭ್ಯವಿರುವ ವಿವಿಧ ಸಂಪನ್ಮೂಲಗಳ ಮೂಲಕ ಅಗತ್ಯ ಪ್ರಮಾಣದ ಪೋಷಕಾಂಶಗಳನ್ನು ಪೂರೈಸುವ ಒಂದು ಪರಿಕಲ್ಪನೆಯಾಗಿದೆ. ಹಿಪ್ಪುನೇರಳೆಯು ಹೆಚ್ಚಿನ ಪ್ರಮಾಣದ ಜೀವರಾಶಿಯನ್ನು ಉತ್ಪಾದಿಸುತ್ತಿದ್ದು ಗುಣಮಟ್ಟದ ಗೂಡಿನ ಉತ್ಪಾದನೆಗಾಗಿ ರೇಷ್ಮೆ ಹುಳುಗಳಿಗೆ ಆಹಾರವಾಗಿ ನೀಡಲಾಗುತ್ತಿದೆ. ಈ ಕಾರಣದಿಂದಾಗಿ ಹಿಪ್ಪುನೇರಳೆಯಲ್ಲಿ ರಾಸಾಯನಿಕಗಳು ಮತ್ತು ರಸಗೊಬ್ಬರಗಳು ಇಲ್ಲದ ಒಂದು ಪರ್ಯಾಯ ಕೃಷಿ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು ಕಡ್ಡಾಯವಾಗಿದೆ. ಇದು ಈ ಮೇಲಿನ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ಸುಸ್ಥಿರ ಉತ್ಪಾದನೆಯನ್ನು ಕಾಪಾಡಿಕೊಳ್ಳಲು ಸಹಕಾರಿಯಾಗಿದೆ. ಆದ್ದರಿಂದ ರಾಸಾಯನಿಕ ಗೊಬ್ಬರಗಳ ಬದಲಿಗೆ ಹಿಪ್ಪುನೇರಳೆಗೆ ಅಗತ್ಯ ಪ್ರಮಾಣದ ಪೋಷಕಾಂಶಗಳನ್ನು ಪೂರೈಸಲು ಪರ್ಯಾಯ ಸಾಧನವಾಗಿ ಸಾವಯವ ಬೇಸಾಯ ಪದ್ಧತಿಯ ಪ್ಯಾಕೇಜ್ ಅನ್ನು ಸಿ.ಎಸ್.ಆರ್.ಟಿ.ಐ ಸಂಸ್ಥೆಯು ಅಭಿವೃದ್ಧಿಪಡಿಸಿದೆ. ಅದರಂತೆ ಈ ಪ್ಯಾಕೇಜ್ ನಲ್ಲಿ ಹಿಪ್ಪುನೇರಳೆಯ ಬೆಳವಣಿಗೆ ಹಾಗೂ ಇಳುವರಿಗಾಗಿ ಹೆಚ್ಚಿನ ಪ್ರಮಾಣದ ಎನ್.ಪಿ.ಕೆ (ಸಾರಜನಕ, ರಂಜಕ ಮತ್ತು ಪೊಟ್ಯಾಷ್) ಸರಿದೂಗಿಸಲು ಸಾವಯವ ಮತ್ತು ಜೈವಿಕ ಪರಿಕರಗಳನ್ನು ಬಳಸಲಾಗಿದೆ. ಸಾವಯವ ಪ್ಯಾಕೇಜ್ ನಲ್ಲಿ ವರ್ಷಕ್ಕೆ ಒಂದು ಹೆಕ್ಟೇರ್ ಗೆ ಸುಮಾರು 58 ಮೆ. ಟನ್ ನಷ್ಟು ಸೊಪ್ಪನ್ನು ಉತ್ಪಾದಿಸಬಹುದಾಗಿದೆ. ಇದು ಗುಣಮಟ್ಟ ಮತ್ತು ಪ್ರಮಾಣಕ್ಕೆ ಅನುಗುಣವಾಗಿ ಸಾಂಪ್ರದಾಯಿಕ ಪ್ಯಾಕೇಜ್ ಗೆ ಸಮನಾಗಿರುತ್ತದೆ. ಅಲ್ಲದೆ ಸಾಂಪ್ರದಾಯಿಕ ವಿಧಾನದಲ್ಲಿ ರಸಗೊಬ್ಬರಗಳನ್ನು 5 ಸಮ ಕಂತುಗಳಲ್ಲಿ ಹಾಕಲಾಗುತ್ತಿದ್ದು ಸಾವಯವ ಪದ್ಧತಿಯಲ್ಲಿ ಕೇವಲ 2 ಸಮ ಕಂತುಗಳಲ್ಲಿ ನೀಡುವುದರಿಂದ ಕಾರ್ಮಿಕರ ಅವಶ್ಯಕತೆಯನ್ನು ಮತ್ತಷ್ಟು ಕಡಿಮೆಗೊಳಿಸುತ್ತದೆ.




ಈ ಪ್ಯಾಕೇಜ್‌ನ್ನು ಅಳವಡಿಸಿಕೊಳ್ಳುವುದರಿಂದ ಮಣ್ಣಿನ ಫಲವತ್ತತೆಯನ್ನು ದೀರ್ಘಾವಧಿಯವರೆಗೆ ಕಾಪಾಡಿ-ಕೊಳ್ಳಬಹುದಾಗಿದ್ದು ಸುಸ್ಥಿರ ಗುಣಮಟ್ಟದ ಸೊಪ್ಪಿನ ಉತ್ಪಾದನೆಯನ್ನು ಸಾಧಿಸಬಹುದಾಗಿದೆ.



